**ಪಿಡಬ್ಲೂ.1: ಪದ್ಮಾವತಿ.ಎಲ್.,**

**<u>ದಿನಾಂಕಃ 31.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ನೀವು ನೋಟೀಸು ನೀಡಿದ ನಂತರ ಆರೋಪಿ ನಿಮಗೆ ಪ್ರತ್ಯುತ್ತರ ನೀಡಿರುತ್ತಾರೆ ಎಂದರೆ ಸರಿ. ನೋಟೀಸಿನಲ್ಲಿ ನೀವು ಯಾವ ದಿನಾಂಕದಂದು ಎಷ್ಟು ಮೊತ್ತವನ್ನು ಆರೋಪಿಗೆ ನೀಡಿರುತ್ತೀರಿ ಎಂದು ನಿರ್ದಿಷ್ಟವಾಗಿ ನಮೂದಿಸಿರುವುದಿಲ್ಲ ಎಂದರೆ ಸರಿ. ದಿ.22.08.2019 ರಂದು ನೋಟೀಸು ನೀಡಿರುತ್ತೀರಿ ಎಂದರೆ ಸರಿ. ವಿಜಯ ಬ್ಯಾಂಕಿನಲ್ಲಿ ನಾನು ಖಾತೆದಾರನಾಗಿರುತ್ತೇನೆ. ಸುಪರ್ ಮಾರ್ಕೆಟ್ ಖಾತೆಯಿಂದ ನಿಮ್ಮ ಖಾತೆಗೆ ಸುಮಾರು ರೂ.8,95,747/- ಗಳು ವರ್ಗಾವಣೆಯಾಗಿದೆ ಎಂದರೆ ಬಡ್ಡಿ ಹಣ ನೀಡಿರುತ್ತಾರೆ. ನಿಮ್ಮ ಹಾಗೂ ಆರೋಪಿಯ ನಡುವೆ ಮಾತುಕತೆಯದಾಗ ಬಡ್ಡಿ ವಿಷಯವನ್ನು ತಿಳಿಸಿದ್ದೀರಾ ಎಂದರೆ ಸಾಕ್ಷಿಯು ವಾರ್ಷಿಕ ಶೇಕಡ 18 ರಷ್ಟು ಬಡ್ಡಿ ನಿಗದಿಯಾಗಿತ್ತು ಎಂದು ನುಡಿಯುತ್ತಾರೆ. 2014 ಜುಲೈ ಮಾಹೆಯ ಮೊದಲ ವಾರದಲ್ಲಿ ಮನೆ ನಿರ್ಮಿಸಿಕೊಳ್ಳಲು ಹಣ ಕೇಳಿದರು, ಆ ಕಾರಣ ನಾನು ಮನೆಯಲ್ಲಿ ಕೇಳಿ ಹಣ ನೀಡುತ್ತೇನೆ ಎಂದು ಹೇಳಿ ಜುಲೈ ಮಾಹೆಯ ಕೊನೆಯ ವಾರದಲ್ಲಿ ಹಣ ನೀಡಿರುತ್ತೇನೆ. ನಾನು ಆರೋಪಿಗೆ ಹಣ ನೀಡಿದ ವೇಳೆಯಲ್ಲಿ ನನ್ನ ಗಂಡ ಹಾಜರಿದ್ದರು. ಆರೋಪಿಗೆ ರೂ.100/- ಮುಖಬೆಲೆಯ ಒಟ್ಟು ರೂ.13,00,000/- ಗಳನ್ನು ಆರೋಪಿಗೆ ನೀಡಿದೆನು. ಹಣವನ್ನು ನೀವು ಬ್ಯಾಂಕಿನಿಂದ ಹಿಂಪಡೆದಿರುತ್ತೀರಿ ಎಂದರೆ ನಿವೇಶನ ಖರೀದಿ ಮಾಡಲು ನಾನು ಹಣವನ್ನು ನಗದಾಗಿ ಮನೆಯಲ್ಲಿ ಇಟ್ಟುಕೊಂಡಿದ್ದೆನು.

ನೋಟೀಸಿನಲ್ಲಿ ನಿಮ್ಮ ಮತ್ತು ಆರೋಪಿಯ ನಡುವೆ ಸಾಲದ ಕರಾರು ಆಗಿರುವ ಬಗ್ಗೆ ತಿಳಿಸಿರುವುದಿಲ್ಲ ಎಂದರೆ ನಾನು ನಮ್ಮ ವಕೀಲರಿಗೆ ತಿಳಿಸಿದ್ದೆನು ಎಂದು ನುಡಿಯುತ್ತಾರೆ. ನೀವು ಸಾಲದ ಕರಾರಿನಲ್ಲಿ 13 ಲಕ್ಷ ಎಂದು ನಮೂದಿಸಿದ್ದು ನೀವು ನೋಟೀಸಿನಲ್ಲಿ 11 ಲಕ್ಷ ಎಂದು ನಮೂದಿಸಿರುತ್ತೀರಿ ಎಂದರೆ ಸಾಕ್ಷಿಯು ಎರಡು ಲಕ್ಷ ರೂ.ಗಳನ್ನು ಹಿಂದಿರುಗಿಸಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ ಎರಡು ಲಕ್ಷ ರೂ.ಗಳನ್ನು ಹಿಂದಿರುಗಿಸಿರುವ ಬಗ್ಗೆ ನಿಮ್ಮ ನೋಟೀಸು, ದೂರು ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ನಾನು ನಮ್ಮ ವಕೀಲರಿಗೆ ತಿಳಿಸಿದ್ದೆನು ಎಂದು ನುಡಿಯುತ್ತಾರೆ.

ಆರೋಪಿ ನೀಡಿದ ಪ್ರತ್ಯುತ್ತರಕ್ಕೆ ನೀವು ರಿಜಾಯಿಂಡರ್ ನೀಡಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.8 ರಲ್ಲಿ ಬಡ್ಡಿಯ ಬಗ್ಗೆ ನಮೂದಿರುವುದಿಲ್ಲ ಎಂದರೆ ಸರಿಯಲ್ಲ. 2007 ನೇ ಇಸವಿಯಲ್ಲಿ ನನ್ನ ತಂದೆಯ ಕಡೆಯಿಂದ ಬಂದಂತಹ ನಿವೇಶನವನ್ನು ರೂ.11,85,000/- ಗಳಿಗೆ ಮಾರಾಟ ಮಾಡಿದೆನು ಅದರಲ್ಲಿ ರೂ.5,00,000/- ಗಳನ್ನು ಡಿಡಿ ಮುಖಾಂತರ ಉಳಿಕೆ ರೂ.6,85,000/- ಗಳನ್ನು ನಗದಾಗಿ ನೀಡಿದ್ದರು. ಆ ನಂತರ ಡಿಡಿಯನ್ನು ನಗದೀಕರಣಗೊಳಿಸಿ ಆ ಮೊತ್ತವನ್ನು ಸಹ ನಿವೇಶನ ಖರೀದಿಗಾಗಿ ಮನೆಯಲ್ಲಿಯೇ ಹಣವನ್ನು ಇಟ್ಟುಕೊಂಡಿದ್ದೆನು. 2007 ರಿಂದ 2014 ರವರೆಗೆ ನೀವು ಆ ಹಣವನ್ನು ಉಪಯೋಗಿಸಿಕೊಂಡಿರಲಿಲ್ಲವೇ ಎಂದರೆ ಸಾಕ್ಷಿಯು ನನ್ನ ತಮ್ಮ ಮನೆ ನಿರ್ಮಿಸಿಕೊಳ್ಳಲು ಹಣ ಪಡೆದುಕೊಂಡಿದ್ದನು ನಂತರ ಅವನೂ ಸಹ ನಗದು ರೂಪದಲ್ಲಿ ಹಿಂದಿರುಗಿಸಿದ್ದನು. 2007 ನೇ ಇಸವಿಯಿಂದ ನಿಮ್ಮ ಬ್ಯಾಂಕ್ ಸ್ಟೇಟ್ ಮೆಂಟನ್ನು ಹಾಜರುಪಡಿಸಲು ತೊಂದರೆ ಇತ್ತೆ ಎಂದರೆ ಸಾಕ್ಷಿಯು ಅದರ ಅಗತ್ಯ ಇರದ ಕಾರಣ

2012 ನೇ ಇಸವಿಯ ಬ್ಯಾಂಕ್ ಸ್ಟೇಟ್‌ಮೆಂಟನ್ನು ಹಾಜರುಪಡಿಸಿರುತ್ತೇನೆ. ನೀವು ಒಡವೆ ಅಡ ಇಟ್ಟಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಧ್ಯವಾದಲ್ಲಿ ಹಾಜರುಪಡಿಸುತ್ತೇನೆ. ಗಿರವಿ ಅಂಗಡಿಯ ಹೆಸರು ಈಗ ನೆನಪಿರುವುದಿಲ್ಲ. ನೀವು ಯಾವುದೇ ಒಡವೆಗಳನ್ನು ಅಡ ಇಡದಿದ್ದರೂ ಸಹ ಪ್ರಕರಣಕ್ಕಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ನಿವೇಶನ ಮಾರಿದ ನಂತರ ಕಟ್ಟಮಾರನದೊಡ್ಡಿಯಲ್ಲಿ ಮನೆ ನಿರ್ಮಿಸಿಕೊಂಡಿದ್ದೀರಿ ಎಂದರೆ 2012 ನೇ ಇಸವಿಯಲ್ಲಿ ನನ್ನ ಗಂಡ ಅವರ ಹಣದಿಂದ ಮನೆ ನಿರ್ಮಿಸಿದ್ದರು. ಆರೋಪಿತರ ಅಂಗಡಿಯಿಂದ ನೀವು ಮತ್ತು ನಿಮ್ಮ ಗಂಡ ಅನೇಕ ಬಾರಿ ಸಾಮಾನುಗಳನ್ನು ಖರೀದಿ ಮಾಡಿರುತ್ತೀರಿ ಎಂದರೆ ಹಣ ನೀಡಿ ಖರೀದಿ ಮಾಡಿದ್ದೆವು ಎಂದು ನುಡಿಯುತ್ತಾರೆ.

ಚೆಕ್ಕಿನಲ್ಲಿ ನೀವೇ ಬರವಣಿಗೆ ಮಾಡಿರುತ್ತೀರಿ ಎಂದರೆ ಆರೋಪಿ ಹೇಳಿದ ಕಾರಣ ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ನಿ.ಪಿ.1(ಎ) ಮತ್ತು 2(ಎ) ಸಹಿಗಳು 2014 ನೇ ಇಸವಿಯಲ್ಲಿ ಮಾಡಿದಂತಹ ಸಹಿಗಳು ಎಂದರೆ ಸರಿಯಲ್ಲ. ಸಹಿಗಳ ಆಯಸ್ಸನ್ನು ತಿಳಿಯಲು ಲ್ಯಾಬಿಗೆ ಕಳುಹಿಸಲು ನಿಮಗೆ ಯಾವುದೇ ತಕರಾರು ಇದೆಯೇ ಎಂದರೆ ತಕರಾರು ಇರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಮತ್ತು ನಿಮ್ಮ ಗಂಡನ ಆರೋಪಿಯ ಗಂಡ ಸರಕುಗಳನ್ನು ಸಾಲದ ಆಧಾರದ ಮೇಲೆ ಪಡೆಯುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ಪ್ರತ್ಯುತ್ತರ ನೀಡಿದ ನಂತರ ನಿಮ್ಮ ಪ್ರಕರಣಕ್ಕೆ ಅನುಕೂಲವಾಗಲಿ ಎಂದು ಆರೋಪಿ ನೀಡಿದಂತಹ ಖಾಲಿ ಪೇಪರ್ನಲ್ಲಿ ನೀವೇ ಸಾಲದ ಕರಾರನ್ನು ತಯಾರಿಸಿ ನಿ.ಪಿ.8 ರಂತೆ ಹಾಜರುಪಡಿಸಿರುತ್ತೀರಿ ಎಂದರೆ ಸರಿಯಲ್ಲ.

**ಮುಂದುವರೆದ ವಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.